ಕರ್ನಾಟಕ ವಿಧಾನ ಸಭೆ ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕೇಂದ್ರ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE 04/10/2019

# ಆದಾಯ ದುಪ್ಪಟ್ಟು, ಡಿಕೆಸುಗೆ ಇಕ್ಕಟ್ಟು

## ಅಕ್ರಮ ಹಣ ಪ್ರಕರಣ, ಇ.ಡಿಯಿಂದ ತೀವ್ರ ವಿಚಾರಣೆ

■ ವಿಕ ಸುದ್ದಿಲೋಕ ಹೊಸದಿಲ್ಲಿ

ಅಕ್ರಮ ಹಣ ಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ಬಂಧನಕ್ಕೆ ಒಳಗಾಗಿ ತಿಹಾರ್ ಜೈಲು ಪಾಲಾಗಿರುವ ಮಾಜಿ ಸಚಿವ ಡಿ.ಕೆ ಶಿವಕುಮಾರ್ ಸಹೋದರ ಡಿ.ಕೆ ಸುರೇಶ್ ಅವರನ್ನೂ ಜಾರಿ ನಿರ್ದೇಶನಾಲಯ ವಿಚಾರಣೆಗೆ ಒಳಪಡಿಸಿದೆ.

2014ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಡಿ.ಕೆ ಸುರೇಶ್ ಚರಾಸ್ತಿ ಮತ್ತು ಸ್ಥಿರಾಸ್ತಿಗಳ ಒಟ್ಟು ಮೌಲ್ಯ 85 ಕೋಟಿ ರೂಪಾಯಿ. ಅದು 2019ರ ಚುನಾವಣೆ ವೇಳೆ 338 ಕೋಟಿ ರೂ.ಗೇರಿದೆ. ಕೇವಲ 5 ವರ್ಷಗಳಲ್ಲಿ ಆಸ್ತಿಯಲ್ಲಿ 4 ಪಟ್ಟು ಏರಿಕೆ ಕಂಡು ಬಂದಿದ್ದು ಹೇಗೆ ಎಂಬ ಬಗ್ಗೆ ಇ.ಡಿ ಅನುಮಾನಿಸಿದೆ.

ಡಿ ಕೆ ಶಿವಕುಮಾರ್ ಇಡಿ ಕಸ್ಟಡಿಗೆ ಒಳಗಾಗಿ ಒಂದು ತಿಂಗಳು ಕಳೆದಿದೆ. ಇದೀಗ ಡಿ.ಕೆ ಸುರೇಶ್ ಅವರು ಇ.ಡಿ ವಿಚಾರಣೆಗೆ ಒಳಗಾಗಿದ್ದಾರೆ. ಈ ಹಿಂದೆ ಶಿವಕುಮಾರ್ ಅವರ ಮಗಳು ಐಶ್ವರ್ಯ ಕೂಡ ವಿಚಾರಣೆಗೆ ಒಳಪಟ್ಟಿದ್ದರು. ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿ ಶಿವಕುಮಾರ್ ಕುಟುಂಬದ ವಿರುದ್ಧ ತನಿಖೆಯನ್ನು ಇಡಿ ಅಧಿಕಾರಿಗಳು ಮತ್ತಷ್ಟು ತೀವ್ರಗೊಳಿಸುವ ಸಾಧ್ಯತೆ ಇದೆ.



ಇಡಿ ಕೇಳಿದ ಎಲ್ಲ ದಾಖಲೆಗಳನ್ನು ನೀಡಿದ್ದೇನೆ. ವಿಚಾರಣೆ ನಡೆಸುತ್ತಿರುವ ಕಾರಣ ಈಗ ಏನನ್ನೂ ಹೇಳಲಾರೆ. ವಿಚಾರಣೆಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತೇನೆ.

**- ಡಿ.ಕೆ ಸುರೇಶ್**, ಸಂಸದ

ಗುರುವಾರ ಬೆಳಗ್ಗೆ 11 ಗಂಟೆಯಿಂದ ಸಂಜೆ 7.20ರವರೆಗೆ ಡಿ.ಕೆ ಸುರೇಶ್ ಅವರನ್ನು ಇ.ಡಿ ವಿಚಾರಣೆಗೆ ಒಳಪಡಿಸಿತು. ಡಿ. ಕೆ. ಸುರೇಶ್ ಹೊಂದಿರುವ 27 ಆಸ್ತಿಗಳು ಹಾಗೂ ಅವುಗಳ ಖರೀದಿಗಾಗಿ ವಿನಿಯೋಗಿಸಿದ ಬಂಡವಾಳದ ಮೂಲ ಕುರಿತು ತನಿಖೆ ನಡೆಸಲಾಗುತ್ತಿದೆ. ಈ ಕುರಿತು ಡಿ.ಕೆ ಸುರೇಶ್‌ಗೆ ಗುರುವಾರ ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಕೇಳಲಾಗಿದೆ.

ಬೆಂಗಳೂರು ಗ್ರಾಮೀಣ ಕ್ಷೇತ್ರದ ಸಂಸದರೂ ಆಗಿರುವ ಡಿ.ಕೆ ಸುರೇಶ್‌ಗೆ ಇಡಿ ಉರುಳು ಇನ್ನಷ್ಟು ಕಗ್ಗಂಟಾಗಿ ಪರಿಣಮಿಸುವ ಮುನ್ಸೂಚನೆ ದೊರೆತಿದೆ. ಅವರು ಹೊಂದಿರುವ 27 ಆಸ್ತಿಗಳ ಪೈಕಿ 10 ಆಸ್ತಿಗಳ ಖರೀದಿಯೂ ನೇರವಾಗಿ ಹಣಕಾಸಿನ ಮೂಲಕ ನಡೆದಿದೆ ಎಂದು ತನಿಖೆ ವೇಳೆ ಇಡಿ ಅನುಮಾನಿಸಿದೆ. ಈ ಬಂಡವಾಳದ ಮೂಲವನ್ನು ಇಡಿ ಕೆದಕುತ್ತಿದೆ. ವಿಚಾರಣೆ ವೇಳೆ ಕೆಲ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡದ ಸುರೇಶ್ ಅವರು ಪ್ರಶ್ನೋತ್ತರಗಳಿಂದ ನುಣುಚಿಕೊಳ್ಳುವ ಪ್ರಯತ್ನ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದಿಲ್ಲಿ ಫ್ಲ್ಯಾಟ್‌ನಲ್ಲಿ ದೊರೆತ ಹಣ ಕಾಂಗ್ರೆಸ್ ಹೈಕಮಾಂಡ್‌ಗೆ ತಲುಪಿಸಲು ಸಿದ್ಧತೆ ಮಾಡಿಕೊಂಡಿದ್ದ ಹಣವಾಗಿತ್ತೇ? ಈ ಹಣ ಫ್ಲ್ಯಾಟ್‌ಗೆ ವರ್ಗಾವಣೆ ಆಗಿದ್ದು ಹೇಗೆ? ಹವಾಲಾ ಮೂಲಕ ಹಣ ಸಾಗಾಟ ಮಾಡಲಾಗಿತ್ತೇ? ಈ ಅಕ್ರಮ ಹಣ ಸಾಗಾಟಕ್ಕೂ ಡಿಕೆಶಿಗೂ ಇರುವ ಸಂಬಂಧ ಏನು ಎಂಬ ಆಯಾಮದಲ್ಲೂ ಇಡಿ ತನಿಖೆ ನಡೆಸುತ್ತಿದೆ ಎಂದು ತಿಳಿದು ಬಂದಿದೆ.

ಡಿ.ಕೆ ಸುರೇಶ್ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ ಆಗಿರುವ ಕುರಿತು ಇಡಿ ಪ್ರಶ್ನಿಸಿದೆ. ಇದಕ್ಕೆ ಉತ್ತರಿಸಿರುವ ಸುರೇಶ್, ಈ ಹಣಕ್ಕೆ ಆದಾಯ ತೆರಿಗೆ ಪಾವತಿಸಿದ ಕುರಿತು ಸಬೂಬು ನೀಡಿದ್ದಾರೆ. ಇನ್ನೂ ಹಲವು ವ್ಯವಹಾರಗಳಲ್ಲಿ ಬಂಡವಾಳ ಹೂಡಿಕೆ ಮತ್ತು ಈ ಬಂಡವಾಳ ಕ್ರೋಡೀಕರಿಸಿದ ವಿಧಾನ, ಸಂಬಂಧಿಕರಿಗೆ ಮತ್ತು ವ್ಯವಹಾರಗಳಲ್ಲಿನ ಪಾಲುದಾರರಿಗೆ ಹಣ ವರ್ಗಾವಣೆ ಸೇರಿದಂತೆ ಹಲವು ಆಯಾಮಗಳಲ್ಲಿ ಇಡಿ ವಿಚಾರಣೆ ನಡೆಸಿದೆ.